# ಪರಿಶುದ್ಧ ಯೋಜನೆ

**ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ**
**ಐವಾನ ಶಾಹಿ ರಸ್ತೆ ಗುಲಬರ್ಗಾ 585102**
www.parishudh.in Parishudh.in@gmail.com

## ಪತ್ರಿಕಾ ಪ್ರಕಟಣೆ

### ಚಾಮನಾಳ ತಾಂಡ 100% ಬಯಲು ಶೌಚಮುಕ್ತ ಗ್ರಾಮದೆಡೆಗೆ

ಇನ್ಫೋಸಿಸ್ ಪ್ರತಿಷ್ಠಾನದ 'ಪರಿಶುದ್ಧ ಯೋಜನೆ' ಹಾಗೂ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಂ ಇವರ ಆಶ್ರಯದಲ್ಲಿ ಶಹಾಪೂರ ತಾಲೂಕಿನ ಚಾಮನಾಳ ತಾಂಡಾ (ಕಿಶನ್ ತಾಂಡಾ)ವನ್ನು ಶೇ. 100%ರಷ್ಟು 2012ರಲ್ಲಿ ಬಯಲು ಶೌಚಮುಕ್ತ ಗ್ರಾಮವನ್ನಾಗಿ ಪರಿವರ್ತಿಸಲು ಕಾರ್ಯ ಪ್ರಾರಂಭಿಸಲಾಗಿದೆ.

ಒಟ್ಟು ಚಾಮನಾಳ ಕಿಶನ್ ತಾಂಡಾದಲ್ಲಿ 125 ಮನೆಗಳಿದ್ದು, ಎಲ್ಲ 125 ಮನೆಗಳಿಗೂ ಪ್ರತ್ಯೇಕವಾದ ಶೌಚಾಲಯವನ್ನು ನಿರ್ಮಿಸಿ, ಗ್ರಾಮಸ್ಥರು ಗೌರವಾನ್ವಿತ ಜೀವನ ನಡೆಸಲು ನಿರ್ಧರಿಸಿದ್ದಾರೆ.
ಗ್ರಾಮದ ಮುಖ್ಯಸ್ಥರಾದ ಶ್ರೀ ಕಿಶನ ರಾಥೋಡ ಮತ್ತು ಶಾಂತಿಲಾಲ ಮಾಸ್ತರ ಇದೇ ಸಂದರ್ಭದಲ್ಲಿ ಮಾತನಾಡುತ್ತಾ, ಈ ಯೋಜನೆಯು ನಮ್ಮ ತಾಂಡಾಕ್ಕೆ ಬಂದಿರುವುದು ಬಯಸದೇ ಬಂದ ಭಾಗ್ಯವೆಂದು ಹೊಗಳಿದರು ಹಾಗೂ ಈ ಸುವರ್ಣ ಅವಕಾಶದಿಂದ ವಂಚಿತರಾಗದೇ ನಾವು ನಮ್ಮ ತಾಂಡಾವನ್ನು ನಿರ್ಮಲ, ಸ್ವಚ್ಛ ಮತ್ತು ಮಾದರಿ ತಾಂಡಾವನ್ನಾಗಿ ಮಾಡುತ್ತೇವೆಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಗ್ರಾಮದ ಮಹಿಳೆಯೊಬ್ಬಳು ಮಾತನಾಡಿ, ಬಯಲು ಶೌಚಾಲಯ ಹೊಗಲಾಡಿಸಲು ಮಾಡುತ್ತಿರುವ ಪರಿಶುದ್ಧ ಯೋಜನೆಯ ಪ್ರಯತ್ನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದರಿಂದ ಹೆಣ್ಣುಮಕ್ಕಳ ಗೌರವ ಮತ್ತು ಆರೋಗ್ಯ ಕಾಪಾಡಿದಂತಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಯೋಜನೆಯ ನಿರ್ವಾಹಕರಾದ ಶ್ರೀ ವಾಸುದೇವ ಎಮ್. ದೇಶಪಾಂಡೆಯವರು ಮಾತನಾಡುತ್ತ, ಮುಂದೆ ಬರುವ 3 ತಿಂಗಳಿನಲ್ಲಿ ಎಲ್ಲಾ ಮನೆಗಳಲ್ಲಿ ಶೌಚಾಲಯವನ್ನು ನಿರ್ಮಿಸಿ, ಈ ಚಾಮನಾಳ ಕಿಶನ್ ತಾಂಡಾವನ್ನು 100% ಬಯಲು ಶೌಚಮುಕ್ತ ಗ್ರಾಮವನ್ನಾಗಿಸುತ್ತೇವೆ ಎಂದು ಹೇಳಿದರು ಹಾಗೂ ಈ ತಾಂಡ ಇತರೆ ಗ್ರಾಮ ಮತ್ತು ತಾಂಡಾಗಳಿಗೆ ಮಾದರಿಯಾಗಲಿದೆ ಎಂದು ಪ್ರಶಂಸಿದರು. ಈ ಸಂದರ್ಭದಲ್ಲಿ ಯೋಜನೆಯ ವ್ಯವಸ್ಥಾಪಕರಾದ ಶ್ರೀ ಶ್ರೀನಿವಾಸ ದೇಶಮುಖ, ಶ್ರೀ ವ್ಹಿ. ಶಾಂತರೆಡ್ಡಿ, ಶ್ರೀ ಮಹೇಶ ಬಿರಾದಾರ, ಶ್ರೀ ಶಿವಕುಮಾರ ಎಲ್. ಬೀಮಳ್ಳಿ ಉಪಸ್ಥಿತರಿದ್ದರು.

ಪರಿಶುದ್ಧ ಯೋಜನೆ ಉತ್ತರ ಕರ್ನಾಟಕದಲ್ಲಿ ಅಕ್ಟೋಬರ್ 2011ರಿಂದ ಪ್ರಾರಂಭವಾಗಿದ್ದು, ಇದುವರೆಗೆ 120 ಗ್ರಾಮದ ಸುಮಾರು 50,000 ಕುಟುಂಬಗಳಿಗೆ ಶೌಚಾಲಯದ ಅರಿವು ಮೂಡಿಸಿದೆ. ಈಗಾಗಲೇ ಸುಮಾರು 4,800 ಕುಟುಂಬಗಳು ತಮ್ಮ ಹೆಸರನ್ನು ಶೌಚಾಲಯ ನಿರ್ಮಾಣಕ್ಕಾಗಿ ನೊಂದಾಯಿಸಿದ್ದಾರೆ. ಈ ಯೋಜನೆಯಲ್ಲಿ ಇನ್ಫೋಸಿಸ್ ಪ್ರತಿಷ್ಠಾನದಿಂದ 50% ಖರ್ಚು(ರೂ. 8,000 ವರೆಗೆ) ಪ್ರತಿ ಶೌಚಾಲಯ ಕಟ್ಟುವುದಕ್ಕಾಗಿ ಕೊಡಲಾಗುತ್ತಿದೆ.

ಇದುವರೆಗೆ 1,000 ಕುಟುಂಬಗಳು ತಮ್ಮ ಕಂತನ್ನು ಪಾವತಿಸಿ ಇನ್ಫೋಸಿಸ್ ಪ್ರತಿಷ್ಠಾನದಿಂದ ಅನುದಾನವನ್ನು ಪಡೆದು, ಶೌಚಾಲಯವನ್ನು ಕಟ್ಟಿಸಿಕೊಳ್ಳುತ್ತಿವೆ. ತಮ್ಮ ಗ್ರಾಮವನ್ನು 100ಕ್ಕೆ 100ರಷ್ಟು ಬಯಲು ಶೌಚಮುಕ್ತ ಗ್ರಾಮವನ್ನು ಮಾಡಲು ಇಚ್ಛೆ ಇರುವ ಗ್ರಾಮಸ್ಥರು ಯೋಜನೆಯ ನಿರ್ವಾಹಕರಾದ ಶ್ರೀ ವಾಸುದೇವರಾವ ಎಮ್. ದೇಶಪಾಂಡೆ ಮೊಬೈಲ್ ನಂ. 97422-04624 ಸಂಪರ್ಕಿಸಿಬೇಕೆಂದು ಕೋರಲಾಗಿದೆ.